(ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಶ್ರೀ ಎ.ಎಂ. 1 ರಿಂದ 6 ನೇ ಆರೋಪಿತರ ಪರ ವಕೀಲರಿಂದ**

ನಾನು ಹತ್ತನೇ ತರಗತಿಯವರೆಗೂ ವ್ಯಾಂಸಗ ಮಾಡಿರುತ್ತೇನೆ. ನಾನು ತೋಟಹಳ್ಳಿ ಹಾಗೂ ಸಾತನೂರು ಶಾಲೆಯಲ್ಲಿ ವ್ಯಾಂಸಗ ಮಾಡಿರುತ್ತೇನೆ. ನನಗೆ ಹುಟ್ಟಿನಿಂದ ಎಡಗಣ್ಣಿನ ದೃಷ್ಟಿ ದೋಷವಿರುತ್ತದೆ. ನಾನು ಹತ್ತನೇ ತರಗತಿಯವರೆಗೆ ವ್ಯಾಂಸಗ ಮಾಡಿ, ನಂತರ ವ್ಯವಸಾಯವನ್ನು ಮಾಡಿಕೊಂಡು ಬಂದಿರುತ್ತೇನೆ. ನನ್ನ ಬಲಗಣ್ಣಿನಲ್ಲೂ ಸಹ ದೃಷ್ಟಿ ದೋಷವಿರುತ್ತದೆ. ಆದ್ದರಿಂದ ಸಣ್ಣ ಅಕ್ಷರಗಳನ್ನು ಓದಲು ಆಗುವುದಿಲ್ಲ. ಸಾಕ್ಷಿಗೆ ನ್ಯಾಯಾಲಯದ ಕಟಕಟೆಯ ಅಂಟಿಸಿರುವ ಪ್ರಮಾಣವನ್ನು ಓದಲು ಸೂಚಿಸಿದಾಗ ಸಾಕ್ಷಿಯು ನನಗೆ ಸಣ್ಣ ಅಕ್ಷರವಾದ್ದರಿಂದ ಓದಲು ಆಗುತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ತಂದೆ ಟಿ.ಸಿ.ನಾರಾಯಣಗೌಡರು ಒಂದು ಗ್ರಾನೈಟ್ ಸಂಸ್ಥೆಯಲ್ಲಿ ಸೂಪರ್ ವೈಸರ್ ಆಗಿ ಕೆಲಸವನ್ನು ನಿರ್ವಹಿಸಿದ್ದರು. ನನ್ನ ತಂದೆ ಕ್ಯಾನ್ಸರ್ ಖಾಯಿಲೆಯಿಂದ ತೀರಿಕೊಂಡಿರುತ್ತಾರೆ. ನನ್ನ ಹೆಸರಿನಲ್ಲಿ ಎರಡು ಲಾರಿಗಳು ಇರುತ್ತವೆ. ಅವುಗಳನ್ನು ನನ್ನ ತಂದೆಯವರು ನೋಡಿಕೊಳ್ಳುತ್ತಿದ್ದರು. ಎರಡು ಲಾರಿಗಳ ಪೈಕಿ ಒಂದು ಲಾರಿ ಸುಮಾರು 5 ವರ್ಷಗಳಿಂದ ಚಾಲನೆಯಲ್ಲಿ ಇರುವುದಿಲ್ಲ. ಇನ್ನೊಂದು ಲಾರಿಯನ್ನು ಪರಂದಾಮ ಎಂಬುವವರು ಚಾಲನೆ ಮಾಡುತ್ತಿದ್ದಾರೆ. ಸಾತನೂರು ರೂರಲ್ ಪ್ರೌಢಶಾಲೆಯಲ್ಲಿ ಕೋ ಎಜುಕೇಷನ್ ಇರುತ್ತದೆ ಎಂದರೆ ಸರಿ. ಈ ಪ್ರಕರಣದ 5 ನೇ ಆರೋಪಿ ಕೇಶವಮೂರ್ತಿ ನನ್ನ ತಾಯಿಯ ದೊಡ್ಡಪ್ಪನ ಮಗ. 5 ನೇ ಆರೋಪಿ ಗ್ರಾನೈಟ್ ಸಂಸ್ಥೆಯಲ್ಲಿ ಕೆಲಸ ಮಾಡಿಕೊಂಡಿದ್ದನು ಎಂದರೆ ಸರಿಯಲ್ಲ. ಆತನು ನಮ್ಮ ಮನೆಗೆ ಬಂದು ಹೋಗುವುದನ್ನು ಮಾಡುತ್ತಿದ್ದನು.

ನಾನು ಕನಕಪುರ ಶಾಖೆಯ ಕ್ಯಾನರಾ ಬ್ಯಾಂಕ್, ಸಾತನೂರು ಶಾಖೆಯ ಕರ್ನಾಟಕ ಬ್ಯಾಂಕಿನಲ್ಲಿ ಖಾತೆಗಳನ್ನು ಹೊಂದಿರುತ್ತೇನೆ. ಸಾತನೂರಿನ ಎಸ್‌ಬಿಐ ಶಾಖೆಯಲ್ಲಿ ಬ್ಯಾಂಕ್ ಖಾತೆಯನ್ನು ಹೊಂದಿದ್ದು, ಈಗ ಸದರಿ ಖಾತೆಯನ್ನು ಸ್ಥಗಿತಗೊಳಿಸಿರುತ್ತೇನೆ. ನಾನು ಸದರಿ ಖಾತೆಯನ್ನು ಯಾವ ಇಸವಿಯಲ್ಲಿ ಸ್ಥಗಿತಗೊಳಿಸಿರುತ್ತೇನೆಂದು ಈಗ ಹೇಳಲು ನೆನಪಿಲ್ಲ. ಸಾತನೂರಿನ ಎಸಬಿಐ ಹಾಗೂ ಕರ್ನಾಟಕ ಬ್ಯಾಂಕ್ ಖಾತೆಯ ಸಂಖ್ಯೆಗಳನ್ನು ಹೇಳಲು ನೆನಪಿಲ್ಲ.

ಸಾತನೂರಿನ ರೂರಲ್ ಪ್ರೌಢಶಾಲೆಯಲ್ಲಿ ನಾನು ವ್ಯಾಂಸಗ ಮಾಡುತ್ತಿರುವಾಗ ನನ್ನ ಜೊತೆ ಎಷ್ಟು ಜನ ಹೆಣ್ಣು ಮಕ್ಕಳು ವ್ಯಾಂಸಗ ಮಾಡುತ್ತಿದ್ದರೆಂದು ಈಗ ಹೇಳಲು ಆಗುವುದಿಲ್ಲ. ನನಗೆ ಸಾತನೂರಿನ ಟೈಲರ್ ಸ್ವಾಮಿರವರ ಪರಿಚಯವಿರುವುದಿಲ್ಲ.

ನನಗೆ ಈ ಪ್ರಕರಣದ 3 ನೇ ಆರೋಪಿಯ ಪರಿಚಯವಿರುವುದಿಲ್ಲ. 3 ನೇ ಆರೋಪಿಯು ಕೆಮ್ಮಾಳೆ ಗ್ರಾಮದ ವಾಸಿ ಎಂದು ತಿಳಿದಿರುತ್ತದೆ. ಅವರು ವ್ಯಾಸಂಗ ಮಾಡಿದ ಬಗ್ಗೆ ನನಗೆ ನೆನಪಿರುವುದಿಲ್ಲ. ಆರೋಪಿ-1 ರಿಂದ 5 ರವರು ನನ್ನ ಹಾಗೂ ಚಾಸಾ-1 ರವರ ವಿರುದ್ಧ ಸಾತನೂರು ಪೊಲೀಸ್ ಠಾಣೆಯಲ್ಲಿ, ನಾನು 3 ನೇ ಆರೋಪಿಯೊಂದಿಗೆ ವಿವಾಹವಾಗಿ ಮೋಸ ಮಾಡಿರುತ್ತೇನೆಂದು ದೂರನ್ನು ನೀಡಿದ್ದರು ಎಂದರೆ ಸಾಕ್ಷಿಯು ಸಾತನೂರು ಪೊಲೀಸರು ನಮಗೆ ಠಾಣೆಗೆ ಬರಲು ಸೂಚಿಸಿದ್ದರಿಂದ ನಾನು ಹಾಗೂ ಚಾಸಾ-1 ರವರು ಠಾಣೆಗೆ ಹೋಗಿರುತ್ತೇವೆ. ಆ ಸಮಯದಲ್ಲಿ 3 ನೇ ಆರೋಪಿಯು ಪೊಲೀಸ್ ಠಾಣೆಯಲ್ಲಿ ಇದ್ದರು ಎಂದರೆ ಸರಿ. ನಂತರ ಪೊಲೀಸರು ವಿಚಾರಣೆ ಮಾಡಿದಾಗ ನಾನು ಆ ರೀತಿ ಏನೂ ಇರುವುದಿಲ್ಲ ಎಂದು ಹೇಳಿಕೆ ನೀಡಿದ ನಂತರ ಪೊಲೀಸರು ನನ್ನನ್ನು ಹೋಗಲು ತಿಳಿಸಿರುತ್ತಾರೆ. ಆ ಸಮಯದಲಿ ಪೊಲೀಸರು ಇದು ಕೌಟುಂಬಿಕ ವಿಚಾರವಾದ್ದರಿಂದ ಮಾತನಾಡಿಕೊಂಡು ಬಗೆಹರಿಸಿಕೊಳ್ಳಲು ಸಲಹೆ ನೀಡಿರುತ್ತಾರೆಂದರೆ ಸರಿಯಲ್ಲ. ನಾನು 973906522 ಮೊಬೈಲ್

ನಂಬರನ್ನು ಬಳಸುತ್ತೇನೆ. ನನಗೆ ತೋಟಹಳ್ಳಿ ಗ್ರಾಮದ ಗಿರೀಶ್ ರವರ ಪರಿಚಯವಿರುವುದಿಲ್ಲ. ನಾನು ಗಿರೀಶ್‌ರವರ ಹೆಸರಿನಲ್ಲಿ 9620742748 ನಂಬರಿನ ಮೊಬೈಲ್ ಸಿಮ್ ಖರೀದಿ ಮಾಡಿ 3 ನೇ ಆರೋಪಿಯೊಂದಿಗೆ ಮಾತನಾಡುತ್ತಿದ್ದೆ ಎಂದರೆ ಸರಿಯಲ್ಲ. ನಾನು 3 ನೇ ಆರೋಪಿ ಒಡಾಫೋನ್ ಹೆಸರಿನ ಫೋನ್ ಕೊಡಿಸಿದ್ದೆ ಎಂದರೆ ಸರಿಯಲ್ಲ. ನನ್ನ ಜನ್ಮ ದಿನಾಂಕ 26.01.1994 ಇರುತ್ತದೆ. ನಾನು ಯಾವ ಇಸವಿಯಲ್ಲಿ ಎಸ್‌ಎಸ್‌ಎಲ್‌ಸಿಯನ್ನು ಮುಗಿಸಿದ ಅಂತಇಸವಿ ನೆನಪಿರುವುದಿಲ್ಲ. 3 ನೇ ಆರೋಪಿಗೆ ಹಣದ ಅವಶ್ಯಕತೆ ಇದ್ದ ಸಮಯದಲ್ಲಿ ನಾನು ನನ್ನ ಬ್ಯಾಂಕ್ ಖಾತೆ ಮುಖಾಂತರ ಹಾಗೂ ನಗದು ಮೂಲಕ ಹಣವನ್ನು ಪಾವತಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು 3 ನೇ ಆರೋಪಿಯೊಂದಿಗೆ ಬೆಂಗಳೂರಿನಲ್ಲಿ ವಿವಾಹವಾಗಿ, ಆಗಾಗ್ಗೆ 3 ನೇ ಆರೋಪಿಯು ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದ ಮನೆಗೆ ಹೋಗಿ ಬರುತ್ತಿದ್ದೆನು ಎಂದರೆ ಸರಿಯಲ್ಲ. ನನ್ನ ಹಾಗೂ 3 ನೇ ಆರೋಪಿಯ ವಿವಾಹವನ್ನು 5 ನೇ ಆರೋಪಿಯು ಮುಂದೆ ನಿಂತು ನಡಸಿರುತ್ತಾರೆ ಎಂದರೆ ಸರಿಯಲ್ಲ. ನಾನು 3 ನೇ ಆರೋಪಿಯೊಂದಿಗೆ ವಿವಾಹವಾದ ವಿಚಾರವು ನನ್ನ ತಂದೆ ಹಾಗೂ ಚಾಸಾ-3 ರವರಿಗೆ ತಿಳಿದು ನನ್ನ ಮೇಲೆ ಹಲ್ಲೆ ಮಾಡಿರುತ್ತಾರೆಂದರೆ ಸರಿಯಲ್ಲ. ಆಗ ನಾನು 3 ನೇ ಆರೋಪಿಯಿಂದ ಅಂತರ ಕಾಯ್ದುಕೊಂಡೆ ಎಂದರೆ ಸರಿಯಲ್ಲ. ನಂತರ 1, 2, 4 ಮತ್ತು 5 ನೇ ಆರೋಪಿತರು 3 ನೇ ಆರೋಪಿಯ ವಿವಾಹವನ್ನು ವೇಣುಗೋಪಾಲ್ ಎಂಬುವವರೊಂದಿಗೆ ಮಾಡಿರುತ್ತಾರೆಂದರೆ ನನಗೆ ತಿಳಿದಿರುವುದಿಲ್ಲ. ನಂತರ ನಾನು 3 ನೇ ಆರೋಪಿಯು ವೇಣುಗೋಪಾಲ್‌ರವರನ್ನು ಮದುವೆಯಾದ ಬಗ್ಗೆ ಪ್ರಶ್ನಿಸಿ, ನಂತರ ಸದರಿ ಮದುವೆಯ ವಿವಾಹ ವಿಚ್ಛೇದವನ್ನು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ನಂತರ ನಾನು 3 ನೇ ಆರೋಪಿಗೆ ಬೆಂಗಳೂರಿನ ಜೆಪಿ ಬಡಾವಣೆಯಲ್ಲಿರುವ ಬೀರೇಶ್ವರ ನಗರದಾಲ್ಲಿ ಮನೆಯನ್ನು ಮಾಡಿಕೊಟ್ಟು ಆಗಾಗ್ಗೆ ಹೋಗಿ ಬರುತ್ತಿದ್ದೆ ಎಂದರೆ ಸರಿಯಲ್ಲ. ನಂತರ ನಾನು ನನ್ನ

ತಂದೆಯವರ ಖಾಯಿಲೆಯನ್ನು ನೆಪಮಾಡಿಕೊಂಡು 3 ನೇ ಆರೋಪಿಯಿಂದ ಅಂತರ ಕಾಯ್ದುಕೊಂಡೆ ಎಂದರೆ ಸರಿಯಲ್ಲ. ನಾನು ಯಾವುದೇ ಚಾಲನಾ ಪರವಾನಗಿಯನ್ನು ಹೊಂದಿರುವುದಿಲ್ಲ ಮತ್ತು ನನ್ನ ಹೆಸರಿನಲ್ಲಿ ಯಾವುದೇ ಮೋಟರ್ ಸೈಕಲ್ ನೊಂದಣಿಯಾಗಿರುವುದಿಲ್ಲ. 3 ನೇ ಆರೋಪಿಯು ಬೇರೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವಾಗ ನಾನು ದೊರೆಸ್ವಾಮಿಗೌಡ ಎಂಬ ವಕೀಲರಿಗೆ 50,000/- ರೂಪಾಯಿ ಹಣ ಪಾವತಿ ಮಾಡಿರುತ್ತೇನೆಂದರೆ ಸರಿಯಲ್ಲ.

ದಿಃ10.05.2020 ರಂದು ಬೆಳಗ್ಗೆ 6-30 ರಿಂದ 7-30 ಗಂಟೆ ಸಮಯದಲ್ಲಿ ನನ್ನ ಮದುವೆಯಾಗಿರುತ್ತದೆ.

ದಿಃ09.05.2020 ರಂದು 1 ರಿಂದ 5 ನೇ ಆರೋಪಿತರು ನಮ್ಮ ಮನೆಯ ಬಳಿ ಬಂದು ಚಾಸಾ-1 ರವರ ಬಳಿ ನನ್ನನ್ನು ಮನೆಯಿಂದ ಹೊರಕಳುಹಿಸಿಕೊಡುವಂತೆ ಕೇಳಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆರೋಪಿತರು ನಮ್ಮ ಮನೆಯ ಗೇಟ್ ಬೀಗವನ್ನು ಒಡೆದು ಮನೆಗೆ ನುಗ್ಗಿ ಚಾಸಾ-1 ರವರಿಗೆ ಹಲ್ಲೆ ಮಾಡಿರುತ್ತಾರೆ. ಆ ಸಮಯದಲ್ಲಿ 1 ರಿಂದ 5 ನೇ ಆರೋಪಿತರು ಚಾಸಾ-1 ರವರನ್ನು ಕುರಿತು ನನ್ನ ಜೊತೆ 3 ನೇ ಆರೋಪಿಯ ವಿವಾಹ ಮಾಡಬೇಕು ಅದಕ್ಕಾಗಿ ನನ್ನನ್ನು ಮನೆಯಿಂದ ಹೊರಗೆ ಕಳುಹಿಸಿಕೊಡದಿದದ್ದರೆ ನಿಮ್ಮನ್ನು ಕೊಲೆ ಮಾಡುತ್ತೇವೆಂದು ಬೆದರಿಕೆ ಹಾಕಿರುತ್ತಾರೆ. 1 ರಿಂದ 5 ನೇ ಆರೋಪಿತರೊಂದಿಗೆ ಸುಮಾರು 10 ರಿಂದ 15 ಜನರು ಬಂದಿದ್ದರು. ಆ ಸಮಯದಲ್ಲಿ ನಾನು ಮನೆಯ ಹಾಲ್‌ನಲ್ಲಿ ಕುಳಿತುಕೊಂಡಿದ್ದೆನು. ನನಗೆ ದೃಷ್ಟಿ ದೋಷವಿದ್ದರೂ ಸಹ ಸುಮಾರು 10 ರಿಂದ 15 ಅಡಿಯ ಸುತ್ತಮುತ್ತಲಿನ ಪರಿಸರವನ್ನು ನೋಡಿ ಗುರುತಿಸುತ್ತೇನೆ. ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲೆಯನ್ನು ತೋರಿಸಿ ಓದಲು ತಿಳಿಸಿದಾಗ ಸಾಕ್ಷಿಯು ನನಗೆ ಓದಲು ಆಗುತ್ತಿಲ್ಲ ಎಂದು

ತಿಳಿಸಿರುತ್ತಾರೆ. ಆರೋಪಿತರ ಜೊತೆಗೆ ನಮ್ಮ ಮನೆಗೆ ಬಂದ ಸುಮಾರು 10 ರಿಂದ 15 ಜನರ ಹೆಸರುಗಳು ನನಗೆ ತಿಳಿದಿರುವುದಿಲ್ಲ. ಆರೋಪಿತರು ಇನ್ನೋವಾ ಕಾರಿನಲ್ಲಿ ನಮ್ಮ ಮನೆಯ ಬಳಿ ಬಂದಿರುತ್ತಾರೆ. ಅವರ ಜೊತೆ ಬಂದ ವ್ಯಕ್ತಿಗಳು ಎಷ್ಟು ವಾಹನಗಳಲ್ಲಿ ಬಂದಿರುತ್ತಾರೆಂದು ತಿಳಿದಿರುವುದಿಲ್ಲ. ಆ ಸಮಯದಲ್ಲಿ ಪಟೇಲ್ ಕಾಳೀರೇಗೌಡನದೊಡ್ಡಿಯ ಗ್ರಾಮಸ್ಥರು ನಮ್ಮ ಮನೆಯ ಬಳಿ ಸೇರಿದ್ದರು. ನಂತರ ಕಾಲಕ್ರಮೇಣ ತೋಟಹಳ್ಳಿ ಗ್ರಾಮಸ್ಥರೂ ಸಹ ಬಂದಿರುತ್ತಾರೆ. ನಾನು ಗಲಾಟೆಯನ್ನು ನೋಡಿರುತ್ತೇನೆ. ನಮ್ಮ ಮನೆಯ ಪೂರ್ವ ದಿಕ್ಕಿನಲ್ಲಿರುವ ಕಾಂಪೌಂಡ್ ಸುಮಾರು 6 ರಿಂದ 7 ಅಡಿ ಎತ್ತರವಿರುತ್ತದೆ. ಆರೋಪಿತರೊಂದಿಗೆ ಬಂದ ಸುಮಾರು 10 ರಿಂದ 15 ಜನ ನಮ್ಮ ಮನೆಯ ಕಾಂಪೌಂಡ್ ಒಳಗೆ ಹಾಗೂ ಹೊರಗೆ ನಿಂತಿದ್ದರು. ಸಾಕ್ಷಿಗೆ ಒಂದು ವಸ್ತುವನ್ನು ತೋರಿಸಿದಾಗ ಸಾಕ್ಷಿಯು ಅದನ್ನು ಕಬ್ಬಿಣದ ರಾಡು ಎಂದು ತಿಳಿಸಿರುತ್ತಾರೆ. ಸದರಿ ಕಬ್ಬಿಣದ ರಾಡನ್ನು ಈಗಾಗಲೇ ಎಂಒ-6 ಎಂದು ಗುರುತಿಸಲಾಗಿರುತ್ತದೆ. ಎಂಒ-6 ಸುಮಾರು ಎರಡರಿಂದ ಎರಡುವರೆ ಅಡಿ ಇರುತ್ತದೆ. ನಂತರ ಸಾಕ್ಷಿಗೆ ಒಂದು ಬಟ್ಟೆಯನ್ನು ತೋರಿಸಿದಾಗ ಸಾಕ್ಷಿಯು ಅದನ್ನು ಬನಿಯನ್ ಎಂದು ತಿಳಿಸಿರುತ್ತಾರೆ. ನಂತರ ಮತ್ತೊಮ್ಮೆ ಸಾಕ್ಷಿಗೆ ಒಂದು ಬಟ್ಟೆಯನ್ನು ತೋರಿಸಿದಾಗ ಸಾಕ್ಷಿಯು ಅದನ್ನು ಬನಿಯನ್ ತುಂಡು ಬಟ್ಟೆ ಎಂದು ತಿಳಿಸಿರುತ್ತಾರೆ. ಮತ್ತೊಮ್ಮೆ ಸಾಕ್ಷಿಗೆ ಇನ್ನೊಂದು ಬಟ್ಟೆಯನ್ನು ತೋರಿಸಿದಾಗ ಸಾಕ್ಷಿಯು ಅದನ್ನು ಬನಿಯನ್ ಎಂದು ತಿಳಿಸಿರುತ್ತಾರೆ. ಸದರಿ ಬನಿಯನ್‌ನ್ನು ಎಂಒ-2 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಗೆ ಎಂಒ-2 ನ್ನು ತೋರಿಸಿದಾಗ ಅದು ಎರಡು ಕಡೆ ಹರಿದು ಹೋಗಿರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ಈ ಹಂತದಲ್ಲಿ ಸಾಕ್ಷಿಗೆ ಒಂದು ವಸ್ತುವನ್ನು ತೋರಿಸಿದಾಗ ಸಾಕ್ಷಿಯು ಅದನ್ನು ಕಲ್ಲು ಎಂದು ತಿಳಿಸಿರುತ್ತಾರೆ. ಸದರಿ ಕಲ್ಲನ್ನು ಎಂಒ-3 ಎಂದು ಗುರುತಿಸಲಾಗಿರುತ್ತದೆ. ಈ ಹಂತದಲ್ಲಿ ಸಾಕ್ಷಿಗೆ ಎಂಒ-5 ನ್ನು ತೋರಿಸಿದ್ದು ಅದರ ಹಿಡಿಕೆಯ ಬಣ್ಣವನ್ನು ತಿಳಿಸಲು ಸೂಚಿಸಿದಾಗ

ಸಾಕ್ಷಿಯು ಅದರ ಬಣ್ಣವನ್ನು ಹೇಳಲು ಆಗುವುದಿಲ್ಲವೆಂದು ತಿಳಿಸಿರುತ್ತಾರೆ. ಸಾಕ್ಷಿಗೆ ಎಂಒ-1 ನ್ನು ತೋರಿಸಿದಾಗ ಸಾಕ್ಷಿಯು ಅದು ಕಪ್ಪು ಬಣ್ಣದ ಟಿಶರ್ಟ್ ಎಂದು ತಿಳಿಸಿರುತ್ತಾರೆ. ಸದರಿ ಎಂಒ-1 ಹರಿದಿರುತ್ತದೆ, ಆದರೆ ಯಾವ ಭಾಗದಲ್ಲಿ ಹರಿದಿರುತ್ತದೆ ಎಂದು ಹೇಳಲು ಆಗುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

ನಮ್ಮ ಕುಟುಂಬದ ಎಲ್ಲಾ ಸದಸ್ಯರು ಮೊಬೈಲ್ ಫೋನ್ ಬಳಸುತ್ತೇವೆ. ಆರೋಪಿತರು ನಮ್ಮ ಮನೆಗೆ ಬಂದು ಗಲಾಟೆ ಮಾಡಿದರೆಂದು ಹೇಳಲಾದ ಸಮಯದಲ್ಲಿ, ಸದರಿ ಗಲಾಟೆಯ ದೃಶ್ಯವನ್ನು ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಳ್ಳಲು ಆ ಸಮಯದಲ್ಲಿ ಸಾಧ್ಯವಾಗಿರುವುದಿಲ್ಲ. ಗಲಾಟೆ ನಡೆಯಿತೆಂದು ಸಮಯದಲ್ಲಿ ನಮ್ಮ ಮನೆಯ ಸ್ವಲ್ಪ ದೂರದಲ್ಲಿರುವ ನಮ್ಮ ಸಂಬಂಧಿಕರಾದ ದರ್ಶನ್, ಇಂದ್ರಮ್ಮ ಹಾಗೂ ಇತರ ಗ್ರಾಮಸ್ಥರು ಬಂದಿದ್ದರು.

ಚಾಸಾ-2 ರವರಿಗೆ ಹಲ್ಲೆ ಮಾಡಿದಾಗ ಚಾಸಾ-2 ರವರ ರಕ್ತವು ನೆಲದ ಮೇಲೆ ಎರಡು ಕಡೆ ಬಿದ್ದಿತ್ತು. ಚಾಸಾ-2 ಮತ್ತು 3 ರವರನ್ನು ನಾನು, ಚಾಸಾ-1, 4, 5, 6 ಮತ್ತು 7 ರವರು ನಮ್ಮದೇ ಇನ್ನೋವಾ ಕಾರಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ನಾವು ಆಸ್ಪತ್ರೆಗೆ ಹೋಗುವ ಸಮಯದಲ್ಲಿ ಘಟನಾ ಸಮಯದಲ್ಲಿ ಧರಿಸಿದ್ದ ಬಟ್ಟೆಗಳನ್ನು ಬಿಚ್ಚಿಟ್ಟು ಬದಲಿ ಬಟ್ಟೆಗಳನ್ನು ಧರಿಸಿಕೊಂಡು ಚಾಸಾ-2 ಮತ್ತು 3 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಚಾಸಾ-2 ಮತ್ತು 3 ರವರು ಘಟನೆಯ ಬಗ್ಗೆ ವೈದ್ಯರಿಗೆ ಮಾಹಿತಿಯನ್ನು ನೀಡಿರುತ್ತಾರೆ. ನನ್ನ ತಂಗಿ ಚಾಸಾ-6 ರವರು ಎಲ್ಲಿಯವರೆಗೆ ವ್ಯಾಂಸಗ ಮಾಡಿರುತ್ತಾರೆಂದು ತಿಳಿದಿರುವುದಿಲ್ಲ. ಚಾಸಾ-2 ಮತ್ತು 3 ರವರಿಗೆ ತೀವ್ರ ರಕ್ತಗಾಯವಾದ್ದರಿಂದ ಅವರನ್ನು ಮೊದಲಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಚಾಸಾ-2 ಮತ್ತು 3 ರವರಿಗೆ ಚಿಕಿತ್ಸೆ

ಕೊಡಿಸುವ ಆತುರದಲ್ಲಿ ನಾವು ಕನಕಪುರ ಪುರ ಪೊಲೀಸ್ ಠಾಣೆಗೂ ದೂರನ್ನು ಸಲ್ಲಿಸಲು ಆಗಿರುವುದಿಲ್ಲ. ಚಾಸಾ-2 ಮತ್ತು 3 ರವರಿಗೆ ಚಿಕಿತ್ಸೆ ಕೊಡಿಸಿದ ನಂತರ ರಾತ್ರಿ 7-30 ರಿಂದ 8-00 ಗಂಟೆಗೆ ಮನೆಗೆ ವಾಪಸ್ ಹೋಗಿರುತ್ತೇವೆ. ಚಾಸಾ-1 ರವರು ದೂರನ್ನು ನೀಡುವ ಸಲುವಾಗಿ ಮೊದಲೇ ಆಸ್ಪತ್ರೆಯಿಂದ ಹೋಗಿರುತ್ತಾರೆ. ಚಾಸಾ-1 ರವರು ಹೊರಗೆ ಇದ್ದ ವ್ಯಕ್ತಿಗಳ ಸಹಾಯದಿಂದ ಆಸ್ಪತ್ರೆಯಿಂದ ಹೋಗಿರುತ್ತಾರೆ. ದೂರು ನೀಡಿದ ಮರುದಿವಸ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿರುತ್ತಾರೆ. ಆ ಸಮಯದಲ್ಲಿ ನಾನು ಮನೆಯ ಒಳಗೆ ಇದ್ದುದರಿಂದ ಪೊಲೀಸರು ಏನು ಮಾಡಿದರು ಎಂಬುದರ ಬಗ್ಗೆ ನನಗೆ ತಿಳಿದಿರುವುದಿಲ್ಲ. ಪೊಲೀಸರು ನಮ್ಮ ಮನೆಯ ಬಳಿ ಬಂದಾಗ ನನ್ನ ತಂಗಿ ಚಾಸಾ-6 ರವರು ಮನೆಯಲ್ಲಿ ಇದ್ದರು.

ದಿಃ16.05.2020 ರಂದು ಪೊಲೀಸರು ನನ್ನನ್ನು ಪೊಲೀಸ್ ಠಾಣೆಗೆ ಬರುವಂತೆ ಸೂಚಿಸಿದ ಮೇರೆಗೆ ಅದೇ ದಿನ ನಾನು ಪೊಲೀಸ್ ಠಾಣೆಯಲ್ಲಿ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಪೊಲೀಸರು ಮಹಜರ್ ಕಾಲದಲ್ಲಿ ಚಾಸಾ-1 ರವರಿಗೆ ಸೇರಿದ ಬಟ್ಟೆಗಳನ್ನು ಅಮಾನತುಪಡಿಸಿಕೊಂಡಿರುವುದಿಲ್ಲ. ನಾನು ಪೊಲೀಸರ ಸಮಕ್ಷಮ "ಈ ಗಲಾಟೆ ಕಾರಣ ರತ್ನಮ್ಮರವರ ಮಗಳು ಪುಷ್ಪಾಳನ್ನು ನಾನು ಮದುವೆ ಮಾಡಿಕೊಳ್ಳಬೇಕೆಂದು ಈ ಹಿಂದಿನಿಂದಲೂ ತಕರಾರು ಇದ್ದು, ಇದೇ ವಿಚಾರವಾಗಿ ಕೊಲೆಗೆ ಪ್ರಯತ್ನಿಸಿರುತ್ತಾರೆ" ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ನನ್ನ ಜೊತೆ ಚಾಸಾ-5 ಮತ್ತು 6 ರವರು ಪೊಲೀಸ್ ಠಾಣೆಗೆ ಬಂದು ಅದೇ ದಿನ ಹೇಳಿಕೆ ನೀಡಿರುತ್ತಾರೆ. ನನ್ನ ತಂದೆಯವರು ಸಾತನೂರಿನಲ್ಲಿ ಪಶು ಆಹಾರ ಕೇಂದ್ರದ ಅಂಗಡಿಯನ್ನು ನಡೆಸುತ್ತಿದ್ದರು. ಸದರಿ ಅಂಗಡಿಯನ್ನು ನಾನು ನೋಡಿಕೊಳ್ಳುತಿದ್ದೆ ಎಂದರೆ ಸರಿಯಲ್ಲ. ನಾನು 3 ನೇ ಆರೋಪಿಯನ್ನು ಮದುವೆಯಾಗಿ, ನಂತರ ಅವರನ್ನು ಬೆಂಗಳೂರಿನಲ್ಲಿ ಮನೆ ಮಾಡಿ ಇಟ್ಟು ನೋಡಿಕೊಳ್ಳುತ್ತಿದ್ದೆ ಎಂದರೆ

ಸರಿಯಲ್ಲ. ನನ್ನ ಜೊತೆ ಜೀವನ ನಡೆಸಬೇಕೆಂಬ ಈರಾದೆ ಇಟ್ಟುಕೊಂಡು ವಿವಾಹ ವಿಚ್ಛೇದನ ಪಡೆದುಕೊಂಡಿರುತ್ತಾಳೆ ಎಂದರೆ ಸರಿಯಲ್ಲ. ನಂತರ ನಾನು ಚಾಸಾ-1 ಮತ್ತು ನನ್ನ ತಂದೆಯ ಮಾತನ್ನು ಕೇಳಿಕೊಂಡು ಆರೋಪಿ-3 ರವರಿಂದ ಅಂತರ ಕಾಯ್ದುಕೊಂಡಿದ್ದರಿಂದ ಆರೋಪಿತರು ತಮಗೆ ಅನ್ಯಾಯದ ಬಗ್ಗೆ ನ್ಯಾಯ ಕೇಳಿಕೊಂಡು ಪೊಲೀಸ್ ಠಾಣೆಗೆ ದೂರನ್ನು ನೀಡಿರುತ್ತಾರೆಂದರೆ ಸರಿಯಲ್ಲ.

ದಿ:10.05.2020 ರಂದು ಆಶಿಕಾ ಎಂಬುವವರೊಂದಿಗೆ ಮದುವೆಯಾಗಿರುತ್ತೇನೆ. ದಿ:09.05.2020 ರಂದು ಆರೋಪಿತರು ಮತ್ತು ಬೆಂಗಳೂರಿನ ಶಿವಶಕ್ತಿ ಮಹಿಳಾ ಸಂಘದ ಸದಸ್ಯರು ನ್ಯಾಯ ಕೇಳಲು ಬಂದಾಗ ನಾನು ಹಾಗೂ ನಮ್ಮ ಕುಟುಂಬದವರು ಸೇರಿಕೊಂಡು ಅವರಿಗೆ ಹಲ್ಲೆ ಮಾಡಿರುತ್ತಾರೆಂದರೆ ಸರಿಯಲ್ಲ. ನಾವು ಆರೋಪಿತರ ವಿರುದ್ದ ಸುಳ್ಳು ದೂರು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

ದಿ:09.05.2020 ರಂದು ಆರೋಪಿತರ ವಿರುದ್ದ ದೂರು ಸಲ್ಲಿಸಿ ಅವರಿಗೆ ಬೆದರಿಕೆಯನ್ನೊಡ್ಡಿ ನಂತರ ಮದುವೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-2 ಮತ್ತು 3 ರವರಿಗೆ ಆರೋಪಿತರು ಹಲ್ಲೆ ಮಾಡಿ ರಕ್ತಗಾಯಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಎಂಒ-1 ರಿಂದ 7 ನ್ನು ಈ ಕೇಸಿಗೋಸ್ಕರ ಸೃಷ್ಟಿ ಮಾಡಿಕೊಂಡು ಆರೋಪಿತರ ವಿರುದ್ಧ ಸುಳ್ಳು ದೂರನ್ನು ದಾಖಲು ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ-1 ರವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ - ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ. ಎಂದು ಸಾಕ್ಷಿ ಒಪ್ಪಿರುತ್ತಾರೆ.

**(ಕುಮಾರ್.ಹೆಚ್.ಎನ್)**
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ, ಕನಕಪುರದಲ್ಲಿ.